ಯಾವ ಸನ್ನಿವೇಶದಲ್ಲಿ ಏನ್ ಫೀಲ್ ಮಾಡಬೇಕು, ಅದರ ನೋವೇನು, ಅದರ ಖುಷಿಯೇನು, ಅದರ ಸಂಕಟವೇನು, ಅದರ ಪ್ರೀತಿಯೇನು ಎಂಬುದನ್ನು ಮನಸ್ಸಿಗೆ ಹಾಕಿಕೊಳ್ಳುವೆ. ಆಗ ಮಾತ್ರ ಚಿತ್ರಸಾಹಿತಿ ಆ ಪಾತ್ರದ ಭಾವನೆಯನ್ನು ಪಾತ್ರದ ಮೂಲಕ ಹೊರ ತರಲು ಸಾಧ್ಯ. ಆ ಪಾತ್ರ ಆಗುವುದಕ್ಕೆ ಒಂದು ತನ್ಮಯತೆ ಬೇಕು. ಆ ತನ್ಮಯತೆಯೇ ಸಿದ್ಧತೆ.

**2** ವೆರಿ ಸಿಂಪಲ್. ಆ ಟ್ಯೂನ್‌ಗೆ ಸಾಹಿತ್ಯವೂ ಸರಾಗವಾಗಿ ಹೊಂದಿಕೊಂಡಿದೆ ಅಂತಾದರೆ ಸರಿ ಇದೆ ಅಂತ. ಛಂದಸ್ಸು ಹಾಕಿಕೊಂಡು ಬರೆದರೆ ಟ್ಯೂನ್‌ಗೆ ಸಾಹಿತ್ಯ ಹೊಂದುತ್ತದೆ. ಲಘು, ಗುರು, ಮಾತ್ರೆಗಳು ಟ್ಯೂನ್‌ಗೆ ಫಿಕ್ಸ್ ಆದರೆ ಅದು ಸರಿ ಇದ್ದಂತೆ. ಟ್ಯೂನ್‌ಗೆ ತಕ್ಕಂತೆ ಸಾಹಿತ್ಯವನ್ನು ಎಲ್ಲೂ ಅಡೆತಡೆಗಳಿಲ್ಲದೆ ಹಾಡಿದರೆ ಅದು ಹೊಂದುತ್ತಿದೆ ಎಂದು ಅರ್ಥ.

**3** ಈ ಸವಾಲು ಎಲ್ಲ ಗೀತೆರಚನಕಾರರಿಗೂ ಇರುವಂತಹದ್ದು. ಭಾರತೀಯ ಸಿನಿಮಾಗಳೆಂದರೆ ಬಹುತೇಕ ಅವು ಪ್ರೀತಿಗೆ ಸಂಬಂಧಿಸಿದ್ದೇ ಆಗಿರುತ್ತವೆ. ಒಂದೇ ರೀತಿಯ ಸಂದರ್ಭ ಅಥವಾ ಟ್ಯೂನ್ ಎದುರಾಗುವುದು ಪ್ರತಿ ಬಾರಿಯ ಸವಾಲು. ಆದರೆ, ನಿರೀಕ್ಷೆ ಮಾತ್ರ ಹೊಸದಾಗಿರಬೇಕೆಂಬುದು. ಆ ಸವಾಲನ್ನು ಮೆಟ್ಟಿನಿಲ್ಲುವುದು ಅನಿವಾರ್ಯ. ಹಿಂದಿನವರು ಆರಿಸಿ ಬಿಟ್ಟಿರುವುದರಲ್ಲಿ ಏನಿದೆ ಅಂತ ಹುಡುಕಿ ಬರೆಯಬೇಕಾಗುತ್ತದೆ. ಭಾವನೆಗಳು ಅಕ್ಷಯಪಾತ್ರೆ ಇದ್ದಂತೆ. ಯಾವತ್ತಿಗೂ ಅವು ಬರಿದಾಗಲ್ಲ. ಆಯಾ ಕಾಲಕ್ಕೆ ಅದೇ ಭಾವನೆಯನ್ನು ಹೇಳೋಕೆ ಬೇರೆ ಬೇರೆ ರೂಪಗಳು ಸಿಗುತ್ತವೆ. ಹಿಂದಿನ ಹತ್ತು ಹದಿನೈದು ವರ್ಷಗಳಿಗೆ ಹೋಲಿಕೆ ಮಾಡಿದರೆ ಆಗ ಇಲ್ಲದ ರೂಪಗಳು ಈಗ ಜನ್ಮ ತಾಳಿವೆ. ಉದಾಹರಣೆಗೆ ಇಂಟರ್‌ನೆಟ್, ಮಿಸ್‌ಕಾಲ್ ಎಂಬ ಇತ್ಯಾದಿ ಪದಗಳು. ಲ್ಯಾಂಡ್‌ಲೈನ್ ಜಮಾನದಲ್ಲಿ ಇವೆಲ್ಲ ಇರಲಿಲ್ಲ. ಜೀವನ ಪ್ರತಿ ಕ್ಷಣ ಬದಲಾಗುತ್ತೆ. ಭಾವನೆಗಳನ್ನು ಇವತ್ತಿನ ದೃಷ್ಟಿಕೋನದಲ್ಲಿ ಹೇಳಲು ಪ್ರಯತ್ನಿಸಬೇಕು. ಕೆಲವರು ಹೊಸ ಪದಗಳನ್ನಿಟ್ಟುಕೊಂಡೇ ಹಾಡು ಬರೆಯುತ್ತಾರೆ. ಹೊಸ ಪದಗಳ ಬಳಕೆ ಹೊಸತನವಲ್ಲ. ಹೊಸ ಭಾವನೆಗಳನ್ನು ಬಳಸಿದರೆ ಅದು ಹೊಸತನ. ಇಲ್ಲಿ ನಿರಂತರ ಹುಡುಕಾಟವಿರಬೇಕು. ಒಂದು ಸೂಕ್ಷ್ಮ ಗ್ರಹಿಯಾದ ಮನಸ್ಸು, ನಿಮ್ಮ ಹೊರಗಡೆ ಏನು ನಡೆಯುತ್ತಿದೆ, ಈಗಿನ ಪ್ರಪಂಚ ಹೇಗಿದೆ, ಇವತ್ತಿನ ಪ್ರೀತಿ ಎಂದರೆ ಏನು, ಇಂದಿನ ಪ್ರೀತಿಗೆ ಐವತ್ತು ವರ್ಷದ ಹಿಂದಿನ ಪ್ರೀತಿಗೆ ಇರುವ ವ್ಯತ್ಯಾಸವೇನೆಂದು ಗ್ರಹಿಸುವ ಮನಃಸ್ಥಿತಿ ಒಬ್ಬ ಚಿತ್ರಸಾಹಿತಿಗೆ ಇರಬೇಕು. ಆಗ ಈ ಸವಾಲುಗಳನ್ನು ಅವನು ಎದುರಿಸಬಹುದು.

**4** ಸಿನಿಮಾ ಬರಹಗಾರನ ಮೊದಲ ಕಲೆ, ಟ್ಯೂನಿಂಗ್‌ಗೆ ಸಾಹಿತ್ಯ ಬರೆಯುವುದು. ಎರಡನೆಯದು ಡೆಡ್‌ಲೈನಿನ ಒಳಗೆ ಕೆಲಸ ಮುಗಿಸುವುದು. ಎಲ್ಲರ ಸಮಯವನ್ನೂ ಗೌರವಿಸಿ ಡೆಡ್‌ಲೈನಿನ ಒಳಗೆ ಕೊಡುವ ಅನಿವಾರ್ಯತೆ ಇಲ್ಲಿದೆ. ಅದನ್ನು ಇಲ್ಲಿ ಹೃತ್ಪೂರ್ವಕವಾಗಿ ಒಪ್ಪಿಕೊಂಡರೆ ಮಾತ್ರ ನಾನು ಸಿನಿಮಾ ಬರಹಗಾರ ಆಗುತ್ತೇನೆ. ಡೆಡ್‌ಲೈನ್ ಒತ್ತಡ ನನಗೆ ತೊಂದರೆ ಕೊಡುತ್ತದೆ ಎನ್ನುವುದಾದರೆ ನಾನು ಸಿನಿಮಾ ಬರಹಗಾರ ಆಗಲು ಹೋಗಬಾರದು. ಈ ಮನಃಸ್ಥಿಯಲ್ಲಿದ್ದರೆ ಡೆಡ್‌ಲೈನಿನ ಒಳಗೆ ಕೆಲಸ ಮಾಡಬಹುದು. ತುಂಬಾ ಅಪರೂಪಕ್ಕೆ ನಾವು ಡೆಡ್‌ಲೈನ್ ಮೀರುತ್ತೇವೆ. ಒತ್ತಡವೂ ಇರಬೇಕು. ಏಕೆಂದರೆ ಏನೊ ಹೊಸತನ್ನು ತರಿಸುವುದು ಒತ್ತಡವೇ.